**ಕರ್ನಾಟಕ ಸರ್ಕಾರದ ಸಾರ್ವಜನಿಕ ಇಲಾಖೆಯ ಆಯುಕ್ತರ ಕಚೇರಿ, ನೃಪತುಂಗ ರಸ್ತೆ ಬೆಂಗಳೂರು –560001**

ಸಂಖ್ಯೆ: ಯೋ 8 ಪಂ ಸೌ ಕು ನಿ ಶೌ/ಅನು 1/2012–13 ದಿನಾಂಕ: 11–9–2012

**ಸುತ್ತೋಲೆ**

**ವಿಷಯ: ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶುದ್ಧ ಕುಡಿಯುವ ನೀರು ಮತ್ತು ಸ್ವಚ್ಛ ಶೌಚಾಲಯಗಳ ನಿರ್ವಹಣೆಯನ್ನು ಸಮರ್ಪಕವಾಗಿ ಕಾಯ್ದುಕೊಳ್ಳುವಂತೆ ಮಾನ್ಯ ರಾಜ್ಯ ಉಚ್ಛ ನ್ಯಾಯಾಲಯ ನೀಡಿರುವ ತೀರ್ಪಿನ ಬಗ್ಗೆ.**

**ಉಲ್ಲೇಖ:**1.ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಸರ್ಕಾರದ ವಿರುದ್ಧ ದಾಖಲಿಸಲಾಗಿದ್ದ ರಿಟ್ ಪಿಟಿಷನ್ ಸಂ. 26877/2009 ದಾವೆ ಇತ್ಯರ್ಥ ದಿನಾಂಕ 5–9–2012

2. ಮಾನ್ಯ ಆಯುಕ್ತರ ಸುತ್ತೋಲೆ ಸಂ: ಯೋ.8 ಪಂ.ಸೌ.ಕು.ಶೌ/ಅನು 01/2012–13 ದಿನಾಂಕ: 13–08–212.
3. ಸರ್ವ ಶಿಕ್ಷಣ ಅಭಿಯಾನ ಯೋಜನೆ ನಿರ್ದೇಶನಾಲಯದ ಪತ್ರ ದಿನಾಂಕ: 23–01–2012.
4. ಆಗಸ್ಟ್ 2012ರ "ಶಿಕ್ಷಣವಾರ್ತೆ" ಪತ್ರಿಕೆ.
5. ಸೆಪ್ಟಂಬರ್ 6 2012 ರಂದು ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಹೊಸ ದಿಗಂತ, ಕನ್ನಡ ಪ್ರಭ ಮತ್ತು ಡಕ್ಕನ್ ಹೆರಾಲ್ಡ್ ದಿನಪತ್ರಿಕೆಗಳ ಪ್ರಕಟಣೆ.
6. ಮಾನ್ಯ ಸರ್ಕಾರದ ಕಾರ್ಯದರ್ಶಿಗಳವರ ಎಂಪಿಕ್ ಸಭೆ ದಿನಾಂಕ: 09.08.2012
7 ಮಾನ್ಯ ಆಯುಕ್ತರ ಮತ್ತು ಅಪರ ಆಯುಕ್ತರ ಸುತ್ತೋಲೆ ದಿನಾಂಕ;30.07.2012 ಮತ್ತು 04.08.2012

ವಿಷಯದಂತೆ ರಾಜ್ಯದ ಬಹುತೇಕ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಕುಡಿಯುವ ನೀರು ಮತ್ತು ಶೌಚಾಲಯಗಳು ದುಸ್ಥಿತಿಯಲ್ಲಿದ್ದು ಸಮರ್ಪಕವಾಗಿ ಬಳಕೆಯಾಗುತ್ತಿಲ್ಲ ಎಂದು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಸರ್ಕಾರದ ವಿರುದ್ಧ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ರಿಟ್ ಪಿಟಿಷನ್ ಸಂ. 26877/2009 ದಾವೆಯನ್ನು ಗೌರವಾನ್ವಿತ ಮುಖ್ಯ ನ್ಯಾಯಮೂರ್ತಿ ಶ್ರೀ ವಿಕ್ರಮಜಿತ್ ಸೇನ್ ಮತ್ತು ನ್ಯಾಯಮೂರ್ತಿ ಶ್ರೀಮತಿ.ಬಿ.ವಿ ನಾಗರತ್ನ ಅವರನ್ನೊಳಗೊಂಡ ವಿಭಾಗೀಯ ನ್ಯಾಯಪೀಠವು ಸೆಪ್ಟಂಬರ್ 5 2012 ರಂದು ಇನ್ನು ಮುಂದೆ ಸರ್ಕಾರಿ ಶಾಲೆಗಳಲ್ಲಿ ಶುದ್ಧ ಕುಡಿಯುವ ನೀರು ಮತ್ತು ಸ್ವಚ್ಛ ಶೌಚಾಲಯ ಸೌಲಭ್ಯಗಳ ನಿರ್ವಹಣೆಯಲ್ಲಿ ಯಾವುದೇ ಅವಘಡಗಳಿಗೆ ಆಸ್ಪದ ನೀಡಬಾರದು ಎಂಬ ಕಟ್ಟಪ್ಪಣೆ ಷರತ್ತು ವಿಧಿಸಿ ಸರ್ಕಾರದ ಪರವಾಗಿ ದಾವೆಯನ್ನು ಇತ್ಯರ್ಥಪಡಿಸಿದೆ. ಈ ಮಾಹಿತಿಯು ಕೆಲವು ದಿನ ಪತ್ರಿಕೆಗಳಲ್ಲಿಯು ಪ್ರಕಟಗೊಂಡಿರುತ್ತದೆ.

ಮಾನ್ಯ ಉಚ್ಛ ನ್ಯಾಯಾಲಯದ ತೀರ್ಪನ್ನು ಗೌರವಿಸಿ ಅನುಸರಿಸುವುದು ಜಿಲ್ಲೆ, ತಾಲ್ಲೂಕು, ಹೋಬಳಿ, ಕ್ಲಸ್ಟರ್ ಮತ್ತು ಶಾಲಾ ಹಂತಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಇಲಾಖೆಯ ಎಲ್ಲಾ ನಿಯಂತ್ರಣಾಧಿಕಾರಿಗಳು, ಅನುಷ್ಠಾನಾಧಿಕಾರಿಗಳು, ಮೇಲ್ವಿಚಾರಣಾಧಿಕಾರಿಗಳು ಮತ್ತು ಶಾಲಾ ಸಿಬ್ಬಂದಿವರ್ಗದ ಆದ್ಯ ಕರ್ತವ್ಯವಾಗಿದೆ.

ಆದ ಕಾರಣ ಶಾಲೆಗಳಿಗೆ ಭೇಟಿ ನೀಡುವ ಪ್ರತಿ ಅಧಿಕಾರಿಗಳೂ ಸಹ ಕಡ್ಡಾಯವಾಗಿ ಆಗಸ್ಟ್ 13 2012 ರಲ್ಲಿ ಆಯುಕ್ತರು ಹೊರಡಿಸಿರುವ **ಸುತ್ತೋಲೆಯ ಮಾದರಿ ಕಾರ್ಯಸೂಚಿ** ಯನ್ನು ಅನುಸರಿಸಿ (ಆಗಸ್ಟ್ 2012ರ **ಶಿಕ್ಷಣವಾರ್ತೆ** ಪತ್ರಿಕೆ ನೋಡಿ) ಶುದ್ಧ ಕುಡಿಯುವ ನೀರು ಮತ್ತು ಸ್ವಚ್ಛ ಶೌಚಾಲಯ ನಿರ್ವಹಣೆಗಾಗಿ ಮಾಡಿರುವ ಏರ್ಪಾಟನ್ನು ಪರಿಶೀಲಿಸಿ ಲೋಪ-ದೋಷಗಳು ಕಂಡು ಬಂದರೆ ಸ್ಥಳೀಯವಾಗಿಯೇ ಬಗೆಹರಿಸುವುದು. ಈ ವಿಷಯದಲ್ಲಿ ಪ್ರಧಾನ ಪಾತ್ರ ವಹಿಸಬೇಕಾದ ಶಾಲಾ ಮುಖ್ಯೋಪಾಧ್ಯಾಯರು ನಕಾರಾತ್ಮಕ ಮತ್ತು ನಿರ್ಲಕ್ಷ್ಯ ಧೋರಣೆ ತಾಳಿದಲ್ಲಿ, ಅಂತವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಶಿಸ್ತಿನ ಕ್ರಮ ಕೈಗೊಳ್ಳುವ ಮೂಲಕ ಈ ಮೂಲ ಸೌಕರ್ಯಗಳನ್ನು ಅತ್ಯುತ್ತಮ ರೀತಿಯಲ್ಲಿ ಕಾಯ್ದುಕೊಳ್ಳುವುದು.

**ಆಯುಕ್ತರು**
**ಸಾರ್ವಜನಿಕಶಿಕ್ಷಣ ಇಲಾಖೆ**
**ಬೆಂಗಳೂರು**

ಗೆ
**ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆ ಎಲ್ಲಾ ಉಪನಿರ್ದೇಶಕರುಗಳ ಸೂಕ್ತ ಕ್ರಮಕ್ಕಾಗಿ**

ಪ್ರತಿಯನ್ನು:-

1. ಗೌರವ ಪೂರ್ವಕವಾಗಿ ಮಾನ್ಯ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, 6ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು – 560 001 ರವರಿಗೆ
2. ರಾಜ್ಯ ಯೋಜನಾ ನಿರ್ದೇಶಕರು ಸರ್ವ ಶಿಕ್ಷಣ ಅಭಿಯಾನ ನಿರ್ದೇಶನಾಲಯ ಬೆಂಗಳೂರು
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಗುಲ್ಬರ್ಗಾ ರವರ ಸೂಕ್ತ ಕ್ರಮಕ್ಕಾಗಿ
4. ಎಲ್ಲಾ ಜಿಲ್ಲಾ ನೋಡಲ್ ಅಧಿಕಾರಿಗಳ ಸೂಕ್ತ ಕ್ರಮಕ್ಕಾಗಿ
5. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸೂಕ್ತ ಕ್ರಮಕ್ಕಾಗಿ
6. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

......................................................ಜಿಲ್ಲಾ ಪಂಚಾಯತ್

# ದೃಢೀಕರಣ ಪತ್ರ

*ಶ್ರೀಮತಿ/ಶ್ರೀ.........................................................................................., ಮುಖ್ಯ ಶಿಕ್ಷಕರು, ಸರ್ಕಾರಿ ಕಿರಿಯ/ಹಿರಿಯ ಪ್ರಾಥಮಿಕ/ಪ್ರೌಢಶಾಲೆ...........................................................................ಗ್ರಾಮ*

*..........................................................ತಾಲ್ಲೂಕು,.................................................ಜಿಲ್ಲೆ ಆದ ನಾನು ಈ ಮೂಲಕ ನಮ್ಮ ಶಾಲೆಯಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳಿಗಾಗಿ ಇರುವ ಎಲ್ಲಾ ಶೌಚಾಲಯಗಳು ಮತ್ತು ಶುದ್ಧ ಕುಡಿಯುವ ನೀರಿನ ಸೌಲಭ್ಯಗಳನ್ನು ಯಾವುದೇ ಅವ್ಯವಸ್ಥೆಗೆ ಅವಕಾಶ ನೀಡದೇ ಮಕ್ಕಳು, ಶಿಕ್ಷಕರು ಹಾಗೂ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರ ಸಂಪೂರ್ಣ ಸಹಕಾರದೊಂದಿಗೆ ಅತ್ಯುತ್ತಮವಾಗಿ ನಿರ್ವಹಿಸಲಾಗುತ್ತಿದೆ ಎಂದು ದೃಢೀಕರಿಸುತ್ತೇನೆ.*

| | |
|---|---|
| ಅಧ್ಯಕ್ಷರು<br>ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ<br>ಸಹಿ ಹಾಗೂ ಮೊಹರು | ಮುಖ್ಯ ಶಿಕ್ಷಕರು<br>ಶಾಲಾ ಮೊಹರು ಹಾಗೂ ಸಹಿ |
| ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ<br>ಮೊಹರು ಹಾಗೂ ಸಹಿ | ಕ್ಷೇತ್ರ ಶಿಕ್ಷಣಾಧಿಕಾರಿಗಳು<br>ಮೊಹರು ಹಾಗೂ ಸಹಿ |

ಷರಾ:-

ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರತಿ ಸರ್ಕಾರಿ ಕಿರಿಯ/ಹಿರಿಯ/ಪ್ರೌಢಶಾಲೆಗಳಿಂದ ಈ ನಮೂನೆಯಲ್ಲಿ ದೃಢೀಕರಣ ಪತ್ರಗಳನ್ನು ಮತ್ತು ಫೋಟೋ ಆಲ್ಬಮ್ ಸಿದ್ಧಪಡಿಸಿ/ಸಂಗ್ರಹಿಸಿ ಅಕ್ಟೋಬರ್ 2ನೇ ವಾರದಲ್ಲಿ ಮಾನ್ಯ ಆಯುಕ್ತರು ನಡೆಸುವ ಜಿಲ್ಲಾ ಉಪ ನಿರ್ದೇಶಕರ ಸಭೆಯಲ್ಲಿ ಹಾಜರುಪಡಿಸಲು ಅನುಕೂಲವಾಗುವಂತೆ ಉಪ ನಿರ್ದೇಶಕರ ಮೂಲಕ ಆಯುಕ್ತರ ಕಛೇರಿ ಯೋಜನಾ ಶಾಖೆಗೆ ಅತೀ ಶೀಘ್ರವಾಗಿ [ಆಗಸ್ಟ್ 13 2012ರ ಸುತ್ತೋಲೆಯಲ್ಲಿ ತಿಳಿಸಿರುವಂತೆ] ಕಳುಹಿಸಿ ಕೊಡುವುದು.

\\10.96.135.22\typing3server\D\Planning\clean-12.docx